# ಹಂಪಿ ಶಾಸನೋಕ್ತ ನೀರಿನ ನೆಲೆಗಳು

**ಎನ್. ಎಸ್. ವೀರೇಶ ಉತ್ತಂಗಿ**
ವಾರ್ಡ್ ನಂಬರ್ 4
ಉತ್ತಂಗಿ ಅಂಚೆ, ಹೂವಿನಹಡಗಲಿ,
ವಿಜಯ ನಗರ ಜಿಲ್ಲೆ.

Article Link: https://aksharasurya.com/2024/03/veeresha-n-s-2.php

DOI: https://doi.org/10.5281/zenodo.10775246

## ABSTRACT:

ವಿಜಯನಗರ ಕಾಲದಲ್ಲಿ ಹಂಪಿ ರಾಜಧಾನಿಯಾದ ಕಾರಣ ಜನನಿಬಿಡ ಪ್ರದೇಶವಾಗಿತ್ತು. ಜನರ ದಿನನಿತ್ಯದ ಬದುಕಿಗೆ ನೀರು ಅತ್ಯಂತ ಅವಶ್ಯಕ. ನೀರಿನ ಅವಶ್ಯಕತೆ ಪೂರೈಸಲು ವಿಜಯನಗರ ಸಾಮ್ರಾಟರು ಹಂಪಿ ಮಹಾನಗರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಅನೇಕ ಕೆರೆ, ಬಾವಿ, ಕೊಳ, ಕಟ್ಟೆಗಳನ್ನು ನಿರ್ಮಿಸಿದ್ದರು. ನೀರಾವರಿಗಾಗಿ ಹೊಲ ಗದ್ದೆಗಳಿಗೆ ನೀರು ಸರಾಗವಾಗಿ ಹರಿಯಲು ಕಾಲುವೆಗಳನ್ನು ಮಾಡಿಸಿದ್ದರು.

## KEYWORDS:

ಕೆರೆ, ಬಾವಿ, ಕೊಳ, ಕುಂಟೆ, ಕಾಲುವೆ, ಹಂಪಿ, ವಿಜಯನಗರ ಸಾಮ್ರಾಜ್ಯ.

ಮಾನವನ ದೇಹ ನಿರ್ಮಾಣವಾಗಲು ಪಂಚಭೂತಗಳು ಅತ್ಯಂತ ಅವಶ್ಯಕ. ಪಂಚಭೂತಗಳಲ್ಲಿ ಒಂದಾದ ನೀರು ಮನುಕುಲದ ಸಕಲಜೀವಿಗಳ ಜೀವನಾಡಿ. ನೀರು ಇಲ್ಲದಿದ್ದರೆ ಜೀವಿಗಳು ಬಾಳಿಬದುಕಲು ಅಸಾಧ್ಯ. ಮನುಷ್ಯನ ಇಡೀ ಬದುಕನ್ನು ನೀರು ಆವರಿಸಿದೆ. ಮನುಷ್ಯ ಬದುಕಲು ತಿನ್ನುವ ಆಹಾರ, ಧಾನ್ಯಗಳು ಹುಟ್ಟಿ ಬೆಳೆಯಲು ನೀರು ಬೇಕೇಬೇಕು. ಮನುಷ್ಯ ಒಂದು ದಿನ ಊಟಮಾಡದೇ ಇರಬಹುದು. ಆದರೆ ನೀರು ಕುಡಿಯದೇ ಇರಲಾರ. ದೇಹದ ಕೊಳೆ, ಬಟ್ಟೆಯ ಹೊಲಸು, ಮೊದಲಾದ ಸಕಲ ಚರಾಚರವನ್ನು ಸ್ವಚ್ಛಗೊಳಿಸಲು ನೀರು ಬೇಕೇಬೇಕು. ನೀರು ಮನುಷ್ಯ ಬದುಕಿನ ಅವಿಭಾಜ್ಯ ಅಂಗ. ನೀರಿನಿಂದ ಮನುಷ್ಯನನ್ನು ವಿಭಜಿಸಿ ನೋಡಲಾಗದು.

ಪ್ರಾಚೀನ ಕಾಲದಲ್ಲಿ ಮನುಷ್ಯ ನೀರಿನ ನೆಲೆಗಳಾದ ಹಳ್ಳ–ಕೊಳ್ಳ, ನದಿ ತಟಗಳನ್ನು ಹುಡುಕಿಕೊಂಡು ಹೋಗಿ ವಾಸಿಸುತ್ತಿದ್ದ. ಕಾಲಾಂತರದಲ್ಲಿ ಅಲ್ಲಿಯೇ

ಗುಡಿಸಲು / ಆಸರೆಗಳನ್ನು ಕಟ್ಟಿಕೊಂಡು ವಾಸಿಸುತ್ತಾ ಬಂದಿರುವುದನ್ನು ಕಾಣಬಹುದು. ಮನುಷ್ಯ ಒಂದೆಡೆ ನೆಲೆನಿಂತು ಬದುಕಲು ಸಾಕಷ್ಟು ನೀರಿರಬೇಕೆಂದು ತಿಳಿದುಬರುತ್ತದೆ. ಇಲ್ಲಿ 'ನೀರು' ಎಂದರೆ "ಜಲ, ಉದಕ, ಶಕ್ತಿ, ಕಸುವು, ಒದ್ದೆ, ಹಸಿ ದ್ರವ"[1] ಎಂದರ್ಥ. ನೆಲೆ ಎಂದರೆ "ಆಶ್ರಯ, ಆಧಾರ , ವಾಸಸ್ಥಾನ, ನಿವಾಸ, ಸ್ಥಳ, ಜಾಗ, ಆಳ, ತಳ, ಬುಡ, ನಿಲ್ಲುವ ಸ್ಥಳ"[2] ಎಂಬಿತ್ಯಾದಿಯಾಗಿ ಹೇಳಬಹುದು.

ಹಂಪಿ ಪ್ರಾಚೀನ ಕಾಲದಿಂದಲೂ ಜನ ವಸತಿ ಕೇಂದ್ರವಾಗಿದೆ. ಏಕೆಂದರೆ ಇಲ್ಲಿ ಕಲ್ಲಿನ ಆಸರೆಗಳು ನೀರಿನ ನೆಲೆಗಳಾದ ಹಳ್ಳ ಕೊಳ್ಳ ನದಿ ಇರುವುದೇ ಕಾರಣ ಎನ್ನಬಹುದು. ಪ್ರಸ್ತುತ ಪ್ರಬಂಧದಲ್ಲಿ ಹಂಪಿ ಶಾಸನಗಳಲ್ಲಿ ಉಕ್ತವಾಗಿರುವ ನೀರಿನ ನೆಲೆಗಳಾಗಿರುವ ಹೊಳೆ, ಕೆರೆ, ಬಾವಿ ಮೊದಲಾದವುಗಳನ್ನು ಕುರಿತು, ಅವುಗಳಲ್ಲಿ ಸಂಗ್ರಹವಾಗಿರುವ ನೀರಿನ ಬಳಕೆ ಕುರಿತು ವಿಶ್ಲೇಷಿಸಲಾಗಿದೆ.

ಹಂಪಿ ಶಾಸನೋಕ್ತ ನೀರಿನ ನೆಲೆಗಳನ್ನು ಮೂರು ರೀತಿಯಲ್ಲಿ ವಿಭಜಿಸಿ ಅಧ್ಯಯನಕ್ಕೆ ಒಳಪಡಿಸಿ ವಿಶ್ಲೇಷಿಸಲಾಗಿದೆ.

1. **ಹೊಳೆಗಳು**
2. **ಕೆರೆಗಳು**
3. **ಬಾವಿಗಳು**

**ಹೊಳೆಗಳು:**

ಜನಪದರು ನದಿ ತೊರೆಗಳನ್ನು ಹೊಳೆಗಳೆಂದು ಕರೆಯುವುದು ವಾಡಿಕೆಯಾಗಿದೆ. ಹಂಪಿ ಶಾಸನಗಳು ತುಂಗಭದ್ರಾ ನದಿಯನ್ನು ಹೊಳೆಯೆಂದು ಕರೆದಿವೆ. ಯಾವ ಊರಿನ ಹತ್ತಿರ ಈ ನದಿ ಹರಿಯುತ್ತದೆಯೋ ಆ ಊರಿನ ಹೆಸರಿನ ಹೊಳೆಯೆಂದು ಕರೆಯತ್ತಾ ಬಂದಿರುವುದು ಜನರ ವಾಡಿಕೆಯಾಗಿದೆ. ಇದನ್ನೇ ಹಂಪಿ ಶಾಸನಗಳು ಉಲ್ಲೇಖಿಸಿರುವುದು ಕಂಡುಬರುತ್ತದೆ.

ವಿಠಲ ದೇವಾಲಯದ ಮುಂದಿನ ಮಂಟಪದಲ್ಲಿರುವ ಕ್ರಿ. ಶ. 1513ರ ಕೃಷ್ಣದೇವರಾಯನ ಶಾಸನವು

**ವಿಠಲದ(ಬ)ಳಿ ಸಂಕಲಾಪುರದ ಹೊಳೆ।**
**ಹಂಪೆಯ ಹೊಳೆ। ಕಾಳಗಟೆಯ ಹೊಳೆ।**
**ಹುಲಿಗೆಯ ಹೊಳೆ। ಹೊಂನೂರು ಹೊಳೆ।**
**ಕೊರಗಲ ಹೊಳೆ। ಅಂತು ಪಡುವಣ ಹೊಳೆ।**[3]

ಎಂದು ಪಶ್ಚಿಮ ದಿಕ್ಕಿನ ಹೊಳೆಗಳನ್ನ ಉಲ್ಲೇಖಿಸಿದೆ. ಈ ದಿಕ್ಕಿನಲ್ಲಿ

ಸಂಕಲಾಪುರ, ಹಂಪೆ, ಕಾಳಗಟೆ, ಹುಲಿಗೆ, ಹೊನ್ನೂರು ಮತ್ತು ಕೊರಗಲ ಎಂಬ ಹಳ್ಳಿಗಳಲ್ಲಿ ಹೊಳೆಗಳು ಹರಿಯುತ್ತವೆ. ಶಾಸನ ಮುಂದುವರೆದು ಪೂರ್ವದಿಕ್ಕಿಗೆ ಹರಿಯುವ ಹೊಳೆಗಳನ್ನು ಕುರಿತು

**ಮೂಡಣಹೊಳೆ ಕಂಪಿಲೆಯಹೊಳೆ।**

**ಮೂಷ್ಟೂರಹೊಳೆ। ಉಭಯಂ।**[4]

ಎಂದು ಉಲ್ಲೇಖಿಸಿದೆ. ಪೂರ್ವ ದಿಕ್ಕಿಗೆ ಕಂಪ್ಲಿ ಹೊಳೆ ಮತ್ತು ಮೂಷ್ಟೂರು ಹೊಳೆಗಳು ಹರಿಯುತ್ತವೆ. ಈ ಹೊಳೆಗಳಲ್ಲಿ ಜನರ ಪ್ರಯಾಣಕ್ಕಾಗಿ ಹರಿಗೋಲು ಹಾಕುತ್ತಾರೆ. ಹಾಗೆಯೇ ಈ ಶಾಸನದಲ್ಲಿ **"ಚಲುಡಲಾಪುರದ ಕಾಲುವೆ"**[5] ಎಂದೂ **"ಭತ್ತಾದಾಯ ಕಾಲುವೆಯ ನೀರ ಬಿರಾಡ"**[6] ಎಂಬ ಪದ ಪ್ರಯೋಗ ಗಮನಿಸಿದಾಗ ಈ ಹೊಳೆಗಳಿಂದ ಆಯಾಗ್ರಾಮಗಳ ಜಮೀನಿಗೆ ಕಾಲುವೆಗಳ ಮೂಲಕ ನೀರು ಹಾಯಿಸಿ ಗದ್ದೆ ಮಾಡಿ ಭತ್ತ ಬೆಳೆಯುತ್ತಿದ್ದರೆಂದು ತಿಳಿದು ಬರುತ್ತದೆ.

ವಿಠಲದೇವಾಲಯದ ಗರ್ಭಗೃಹದಲ್ಲಿರುವ ಕ್ರಿ.ಶ. 1531 ರ ಅಚ್ಯುತದೇವರಾಯ ಕಾಲದ ಶಾಸನವು **"ವಿರುಪಾಕ್ಷ ವಿಠ(ಲಾ)ಹು(ತಿ)ಗೆ ಹೊಂನುರುಕೆ ಕೊಳಗಟೆ ಕಂಪಿಲಾಪುರ ಆ ಹೊಳೆ(ಯ) ನೂ ಆನೆಗುಂದಿ ಅಂಬಿಗ ಬೋಉಗಣ್ಣ ತಿರುಗಿ ಕೊಟ್ಟು"**[7] ಎಂದು ದಾಖಲಿಸಿದೆ. ಈ ಶಾಸನವು ಆನೆಗುಂದಿ ಅಂಬಿಗರ ಬೌಗಣ್ಣನು ಹೊನ್ನುರುಕೆ ಕೊಳಗಟೆ ಕಂಪಿಲಾಪುರಗಳ ಹೊಳೆಗಳಲ್ಲಿ ಹರಿಗೋಲನ್ನು ಹಾಕುತ್ತಾನೆ. ಅದರಿಂದ ಬಂದ ಆದಾಯವನ್ನು ವಿರೂಪಾಕ್ಷ ಮತ್ತು ವಿಠಲದೇವರ ನೈವೇದ್ಯಕ್ಕೆ ಅರ್ಪಿಸುತ್ತಾನೆ. ಇಲ್ಲಿ ಬೌಗಣ್ಣನಿಗೆ ಹೊಳೆಯ ನೀರು ಆದಾಯದ ಮೂಲವಾಗಿದೆ.

ಹಾಗೇಯೇ ವಿಠಲ ದೇವಾಲಯದ ಕ್ರಿ.ಶ. 1564 ರ ಸದಾಶಿವರಾಯನ ಶಾಸನವು **"ಮುಷ್ಟೂರು ಕುಂಟಜೀಯ ಗ್ರಾಮದ ಹೊಳೆಯ ಬಳಿಯಣ ಹೊಲನ ಬೀಜವರಿ"**[8] ಎಂದು ಉಲ್ಲೇಖಿಸಿದೆ. ಈ ಶಾಸನದಿಂದ ಮುಷ್ಟೂರು ಕುಂಟಜೀಯ ಗ್ರಾಮಗಳ ಹೊಳೆಗಳ ನೀರಿನಿಂದ ನೀರಾವರಿ ಮಾಡುತ್ತಿದ್ದ ವಿಚಾರ ತಿಳಿದು ಬರುತ್ತದೆ.

ತುಂಗಭದ್ರಾ ನದಿಯನ್ನೇ ವಿವಿಧ ಊರುಗಳಲ್ಲಿ ಆ ಊರುಗಳ ಹೆಸರಿನ ಹೊಳೆಗಳೆಂದು ಕರೆಯಲಾಗಿದೆ. ಆ ಊರುಗಳಲ್ಲಿ ಈ ನದಿಯ ನೀರನ್ನು ಕಾಲುವೆಗಳ ಮೂಲಕ ಹಾಯಿಸಿ ಭತ್ತದ ಗದ್ದೆ, ತೆಂಗು ಮೊದಲಾದ ಬೆಳೆಗಳನ್ನು ಬೆಳೆಯುತ್ತಿದ್ದರೆಂದು ತಿಳಿದು ಬರುತ್ತದೆ. ಸಂಕಲಾಪುರದ ಹೊಳೆ, ಹಂಪೆಯ ಹೊಳೆ, ಕಾಳಗಟೆ ಹೊಳೆ, ಹುಲಿಗೆಹೊಳೆ, ಹೊನೂರು ಹೊಳೆ, ಕೊರಗಲು

ಹೊಳೆ, ಕಂಪ್ಲಿಹೊಳೆ, ಮುಷ್ಟೂರುಹೊಳೆ, ಕುಂಟಜೀಯಹೊಳೆ ಒಂಭತ್ತಕ್ಕೂ ಹೆಚ್ಚು ಹೊಳೆಗಳಿಂದ ನೀರಾವರಿ ಮಾಡಿದ್ದರ ಬಗ್ಗೆ ತಿಳಿದು ಬರುತ್ತದೆ.

**ಕೆರೆಗಳು:**

ಹಂಪಿ ಅನೇಕ ದೇವಾಲಯಗಳ ನೆಲೆ ಬೀಡಾಗಿದ್ದಂತೆ ಬಹುಜನರು ವಾಸಿಸುವ ನೆಲೆಯೂ ಆಗಿತ್ತು. ಜನ ಸಂಖ್ಯೆಗನುಸಾರ ನೀರು ಪೂರೈಸಲು ಅನೇಕ ಕೆರೆ ಬಾವಿಗಳು ನಿರ್ಮಾಣವಾಗಿರಬೇಕು. ಕೆರೆ ಎಂದರೆ "ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ, ಅಡ್ಡಗಟ್ಟೆ ಹಾಕಿ ನೀರು ನಿಲ್ಲಿಸಿದ ಸ್ಥಳ. ತಟಾಕ, ಜಲಾಶಯ"[9] ಮಳೆ ನೀರು ಸಂಗ್ರಹವಾಗುವ ವಿಶಾಲವಾದ ಪ್ರದೇಶ ಎಂದರ್ಥ.

ಕೆರೆ ಕಟ್ಟಿಸುವುದು ಜನೋಪಯೋಗಿ ಮತ್ತು ಪುಣ್ಯದ ಕೆಲಸವೆಂದು ಅನಾದಿ ಕಾಲದಿಂದಲೂ ಜನರು ನಂಬಿಕೊಂಡು ಬಂದಿದ್ದಾರೆ. ವಿಜಯನಗರ ಕಾಲದ ತಾಯಂದಿರು ತಮ್ಮ ಮಕ್ಕಳಿಗೆ ಹಾಲುಣಿಸುವಾಗ ಕಿವಿಯಲ್ಲಿ ಕೆರೆ, ಬಾವಿ, ದೇವಾಲಯ ನಿರ್ಮಿಸೆಂದು ಹೇಳುತ್ತಿದ್ದರಂತೆ. ಈ ಕುರಿತು ಕ್ರಿ.ಶ. 1410ರ ಲಕ್ಷ್ಮೀಧರಾಮಾತ್ಯನ ಶಾಸನವು

**ಕೆರೆಯಂ ಕಟ್ಟಿಸು ಬಾವಿಯಂ ಸವಸು**
**ದೇವಾಗಾರಮಂ ಮಾಡಿಸಜ್ಜೆರಯೊಳ್ಸಿಲ್ಕಿದ**
**ನಾಥರಂ ಬಿಡಿಸು**[10]

ಎಂದು ಉಲ್ಲೇಖಿಸುತ್ತದೆ. ಲಕ್ಷ್ಮೀಧರನಿಗೆ ತಾಯಿ ಸಿಂಗಲೆ ತಾನು ಮಗುವಿದ್ದಾಗ ಹಾಲುಣಿಸುತ್ತಾ ಕಿವಿಯಲ್ಲಿ ಮುಂದೆ ದೊಡ್ಡವನಾದ ಮೇಲೆ ಕೆರೆಯನ್ನು ಕಟ್ಟಿಸು ಬಾವಿಯನ್ನು ತೆಗೆಸು ದೇವಾಲಯವನ್ನು ನಿರ್ಮಿಸು ಸೆರೆಸಿಕ್ಕ ಅನಾಥರನ್ನು ಬಿಡಿಸು ಎಂಬ ಲೋಕೋದಾತ್ತ ವಿಚಾರಗಳನ್ನು ಹೇಳುತ್ತಿದ್ದಳೆಂದು ದಾಖಲಿಸಿದೆ. ಈ ಶಾಸನದ ಉಲ್ಲೇಖದಂತೆ ಲಕ್ಷ್ಮೀಧರ ಮತ್ತು ಅರಸರು ಮಂತ್ರಿಗಳು ಅಧಿಕಾರಿಗಳು ಹಂಪಿಯಲ್ಲಿ ಅನೇಕ ಕೆರೆ ಬಾವಿಗಳನ್ನು ಕಟ್ಟಿಸಿರುವುದನ್ನು ಕಾಣಬಹುದು.

ಪ್ರಸನ್ನ ವಿರೂಪಾಕ್ಷ ದೇವಾಲಯದ ನೈರುತ್ಯಕ್ಕೆ ಇರುವ ದೇವಾಲಯದ ಸಮೀಪ ಇರುವ ಕ್ರಿ.ಶ. 1366ರ 1ನೇ ಬುಕ್ಕಾರಾಯನ ಶಾಸನವು

**ಶ್ರೀ ಮನು ಮಹಾಪ್ರಧಾನ ಬಸವೆ ದಂಣಯಕರು**
**ವಿರೂಪಾಕ್ಷ ದೇವರಾ ಭೋಗಕ್ಕೆ ಕೋ(ಟೆ)ಪ(ಶ್ಚಿ)**
**ರಾಮಾಪುರದ(ಕೆರೆ)ಯ ಏರಿಯ ಕೆಳೆಗೆ ತೆಂಕಣ ಕಡೆಯ**[11]

ಎಂದು ಉಲ್ಲೇಖಿಸಿದೆ. ಶಾಸನವು ಒಂದನೇ ಬುಕ್ಕರಾಯನ ಆಳ್ವಿಕೆಯಲ್ಲಿ

ಅವನ ಮಹಾಪ್ರಧಾನ ಬಸವ ದಣ್ಣಾಯಕನು ವಿರೂಪಾಕ್ಷ ದೇವರ ಸೇವೆಗೆ ರಾಮಾಪುರ ಕೆರೆಯ ಕೆಳಗಿನ ಭೂಮಿಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಇದೇ ಹಂಪಿಯ ಶಾಸನಗಳಲ್ಲಿ ಉಕ್ತವಾಗಿರುವ ಅತ್ಯಂತ ಪ್ರಾಚೀನ ಕೆರೆಯಾಗಿದೆ. ಬಹುಶಃ ಇದನ್ನು ಒಂದನೇ ಬುಕ್ಕರಾಯನ ಆದೇಶದಂತೆ ಬಸವ ದಣ್ಣಾಯಕ ಕಟ್ಟಿಸಿರ ಬಹುದಾಗಿದೆ.

ಕಡಲೆಕಾಳು ಗಣೇಶ ಗುಡಿಯ ಮುಂಭಾಗದ ಮಂಟಪದಲ್ಲಿ ನಿಲ್ಲಿಸಿರುವ ಕ್ರಿ.ಶ. 1410ರ ಲಕ್ಷ್ಮೀಧರಾಮಾತ್ಯನ ಶಾಸನವು

**ತೆಂಗು ಕೌಂಗು ಮಾಉ ಮಾದಳೆ(ಅತ್ತಿ)**
**ಜಂಬು ನಿಂಬೆ ಕಂಕೇಲಿ ನೆಲ್ಲಿ ಬಾಳೆ ರಸ್ತಾಳೆ**
**ದಾಳಿಂಬಂ ಮೊದಲಾದ ಫಲತರುಂಗಳಿಂ**
**ಪಲಉ ಪೂಗಿಡುಗಳಿಂ ಬೆಳಂಗುವ ಧ(ರ್ಮ)**
**ತೋಂಟಮಂ ಕಂನಡಿಯ ಕೆರೆಯ ಕೆಳಗೆ**
**ಮಾರಗೊಂಡ (ಮಣ್ಣು)ವಿನ ಖಂ// ಹತ್ತು**
**ಕೊಳಗದ ಗದ್ದೆಯಂ ದೇವರ ಅಂಗರಂಗ**
**ಭೋಗಕ್ಕೆ ಧಾರಾಪೂರ್ವಕಂ ಕೊಟ್ಟು**[12]

ಎಂದು ದಾಖಲಿಸಿದೆ. ಶಾಸನವು ಲಕ್ಷ್ಮೀಧರಾಮಾತ್ಯನು ಮಹಾಶಕ್ತಿ ಹೇರಂಬ ಗಣಪತಿಯನ್ನು ಪ್ರತಿಷ್ಠಾಪಿಸಿ ಅದರ ಪೂಜಾ ಕಾರ್ಯಗಳಿಗೆ ತೆಂಗು ಅಡಿಕೆ ಮಾವು ಮಾದಳೆ (ಅತ್ತಿ) ಜಂಬು, ನಿಂಬೆ ಕಂಕೇಲಿ (ಅಶೋಕಮರ) ನೆಲ್ಲಿ, ಬಾಳೆ ರಸ್ತಾಳೆ, ದಾಳಂಬಿ ಮೊದಲಾದ ರಸಪೂರಿತ ಹಣ್ಣುಗಳ ಮರಗಳು, ಹಲವು ಹೂಗಿಡಗಳ ತೋಟಗಳ ಫಲವತ್ತಾದ ಭೂಮಿ ಕನ್ನಡಿಯ ಕೆರೆಯ ಕೆಳಗೆ ಇತ್ತು. ಆ ಭೂಮಿಯಲ್ಲಿನ ಹತ್ತು ಕೊಳಗ ಗದ್ದೆಯನ್ನು ದಾನ ನೀಡಲಾಗಿದೆ. ಈ ಶಾಸನದಲ್ಲಿ ಬರುವ ಕನ್ನಡಿಯ ಕೆರೆಯನ್ನು ಬಹುಶಃ ಲಕ್ಷ್ಮೀಧರಾಮಾತ್ಯ ಕಟ್ಟಿಸಿರ ಬೇಕೆನಿಸುತ್ತದೆ. ಈ ಕೆರೆಯ ನೀರನ್ನು ಬಳಸಿ ಹಲವು ಹಣ್ಣಿನ ಮರಗಳು. ಹೂಗಿಡಗಳನ್ನು ಬೆಳೆದಂತೆ ತಿಳಿದುಬರುತ್ತದೆ.

ಪ್ರಸನ್ನ ವಿರೂಪಾಕ್ಷ ದೇವಾಲಯದಲ್ಲಿರುವ ಕ್ರಿ.ಶ. 1513ರ ಕೃಷ್ಣದೇವರಾಯನ ಕಾಲದ ಶಾಸನವು

**ಬೀಜವರಿ ಖ1 ಭೂಪತಿಯ ಕೆರೆಯಲೂ ಹುಲು**
**ಸೋಪು ತೋಟದ ಸ್ತಳ ಗೌರಾಜಿಯ ಕೆರೆಯ**
**ಗ್ರಾಮ 1 ಅಂತು ಗ್ರಾಮ 4 ತೋಟ 3ಮಾನ್ಯಗಳು**[13]

ಎಂದು ಉಲ್ಲೇಖಿಸಿವೆ. ಕೃಷ್ಣದೇವರಾಯನು ಪ್ರಸನ್ನ ವಿರೂಪಾಕ್ಷ ದೇವರ

ಸೇವೆಗೆ ಭೂಪತಿ ಕೆರೆಯ ಬಳಿ ಇರುವ ತೋಟದ ಸ್ಥಳ, ಗೌರಾಜಿಯ ಕೆರೆಯ ಗ್ರಾಮ ಮತ್ತು ತೋಟವನ್ನು ಮಾನ್ಯವಾಗಿ ನೀಡಿರುವುದು ತಿಳಿದು ಬರುತ್ತದೆ. ಈ ಶಾಸನದಲ್ಲಿ ಬೀಜವರಿ, ತೋಟ, ಭತ್ತ, ನೀರ, ಬಿರಾಡ ಎಂಬ ಪದಗಳು ಬಳಕೆಯಾಗಿದ್ದನ್ನು ಗಮನಿಸಿದರೆ ಈ ಕೆರೆಗಳಿಂದ ನೀರು ಹಾಯಿಸಿ ತೋಟ, ಗದ್ದೆಯನ್ನು ಮಾಡಿದಂತೆ ತೋರುತ್ತದೆ.

ಹಜಾರ ರಾಮಸ್ವಾಮಿ ದೇವಾಲಯದ ದಕ್ಷಿಣ ಗೋಡೆಯಲ್ಲಿರುವ ಕ್ರಿ.ಶ. 1521ರ ಕೃಷ್ಣದೇವರಾಯನ ಶಾಸನವು

**ಕರಣಿಕ ಮಂಗರಸರ ಮನುಷ್ಯ ಅಧಿಕಾರಿ**
**ಅಲ್ಲಮರಸರು ಆಗಮಿಕ ನಾರಾಯಣಭಟರು**
**ಸ್ತಾನಿಕ ಮಾಧವಯಗಳು ಸ್ಥಳದ ಸೇವಬೋವ**
**ನರಸಯಗಳು ಮುಂತಾದ ಸ್ಥಾನದವರು ನಾಲು**
**ಕಟಿಸಿದ ಕೆರೆಗೆ ಕಟುಮಾನ್ಯವಾಗಿ ವೊಡಂಬಟ್ಟು**
**ಕೊಟದು ತಾಳೂರು ಹಸಿಗೆ ಕೊಳಗದಲು ಬೀಜವರಿಗದ**[14]

ಎಂದು ದಾಖಲಿಸಿದೆ. ಕೃಷ್ಣದೇವರಾಯ ಕಟ್ಟಿಸಿದ ದೊಡ್ಡಕೆರೆಗೆ ಸ್ಥಳೀಯ ಅಧಿಕಾರಿಗಳಾದ ಅಲ್ಲಮರಸ, ನಾರಾಯಣಭಟ್ಟ, ಮಾಧವಯ್ಯ, ನರಸಯ್ಯ ಕಟುಮಾನ್ಯವಾಗಿ ಒಂದು ಖಂಡುಗ ಗದ್ದೆಯನ್ನು ನೀಡಿದ್ದಾರೆ. ಇಲ್ಲಿ ಉಲ್ಲೇಖವಾಗಿರುವ ದೊಡ್ಡ ಕೆರೆಯಿಂದ ನೀರು ಹಾಯಿಸಿ ಗದ್ದೆ ಮಾಡಿ ವ್ಯವಸಾಯ ಮಾಡಿರುವುದು ತಿಳಿದು ಬರುತ್ತದೆ.

ಇದೇ ಕಾಲಕ್ಕೆ (1521) ಸೇರಿದ ಇದೇ ಅರಸನ ತುರ್ತು ಕಾಲುವೆ ಸೇತುವೆ ಬಳಿ ಇರುವ ಶಾಸನವು

**...ಮಲ್ಲಿಕಾರ್ಜುನ ದೇವರಿಗೆ ಕೋಲ ರಾಮೈಯನ ಮ**
**ನಾಯಕ(ರು) ಭೂಪತಿ ಕೆರೆಯ ಕಟೆಯ ಮೇಲಣ**[15]

ಎಂದು ಉಲ್ಲೇಖಸಿದೆ. ಈ ಶಾಸನವು ಭೂಪತಿ ಕೆರೆಯನ್ನು ಮಾತ್ರ ಉಲ್ಲೇಖಸಿದೆ. ಇದರಿಂದ ಬೇರೆ ವಿಷಯ ತಿಳಿದು ಬರುವುದಿಲ್ಲ.

ಅಚ್ಯುತನಾರಾಯಣಸ್ವಾಮಿ ದೇವಾಲಯದ ಉತ್ತರ ಗೋಪುರದ ಪಶ್ಚಿಮ ಗೋಡೆಯಲ್ಲಿ ಎಡಗಡೆಗೆ ಇರುವ ಕ್ರಿ. ಶ. 1534ರ ಅಚ್ಯುತದೇವರಾಯನ ಶಾಸನವು

**ಬಡಗ ತುಂಗಭದ್ರಾತೀರದ ಸೀತಾಕೊಂಡ**
**[ತೆಂಕ]ಲು ಭೂಪತಿಕೆರೆ ಯೀ ಚತುಸೀಮೆ**[16]

ಎಂದು ಉಲ್ಲೇಖಿಸಿದೆ. ಈ ಶಾಸನದಲ್ಲಿ ಅಚ್ಯುತರಾಯ ಪೇಟೆಯ ಎಲ್ಲೆಯನ್ನು ಹೇಳುವಾಗ ಭೂಪತಿ ಕೆರೆಯ ಉಲ್ಲೇಖಮಾಡಲಾಗಿದೆ. ಅಚ್ಯುತರಾಯ ಪೇಟೆಯ ದಕ್ಷಿಣಕ್ಕೆ ಭೂಪತಿ ಕೆರೆ ಇದೆ ಎಂಬುದು ಶಾಸನದಿಂದ ತಿಳಿದುಬರುತ್ತದೆ.

ನಲ್ಲಾಪುರ–ಕಾಮಲಾಪುರ ರಸ್ತೆಯ ಉತ್ತರಕ್ಕೆ ಇರುವ ಹೊಲದಲ್ಲಿನ ಕ್ರಿ.ಶ. 1539ರ ಶಾಸನವು

**ಕುಡುಚಿರುವಣಿ ನಲತಿಂಮನ ಬೋಇ ಚಿಕರಾಯ**
**ಲಕುಪುಂಣ್ಯಂಗಾನು ಕಟಿಂಚಿನ ಚೆರುವು**[17]

ಎಂದು ದಾಖಲಿಸಿದೆ. ಶಾಸನವು ಅಚ್ಯುತರಾಯ ತನ್ನ ಮಗ ವೆಂಕಟಾದ್ರಿ ಚಿಕ್ಕರಾಯನಿಗೆ ಪುಣ್ಯವಾಗಲೆಂದು ನಲತಿಮ್ಮನ ಬೋಯಿ ಕೆರೆ ಕಟ್ಟಿಸಿದ್ದನ್ನು ತಿಳಿಸುತ್ತದೆ. ಶಾಸನದಲ್ಲಿ ಕೆರೆಯನ್ನು ಎಲ್ಲಿ ಕಟ್ಟಿಸಲಾಗಿದೆ ಎಂಬುದರ ಬಗ್ಗೆ ಮಾಹಿತಿ ದೊರೆಯುವುದಿಲ್ಲ.

ಚಿಕ್ಕಹುಡೆ ದೇವಾಲಯದ ದಕ್ಷಿಣಕ್ಕಿರುವ ಕಲ್ಲಿನ ಮೇಲಿರುವ ಕ್ರಿ.ಶ. 1540ರ ಅಚ್ಯುತರಾಯನ ಕಾಲದ ಶಾಸನವು

**ಧ(ಂ)ರ್ಮ ಸಾಗರದಲ್ಲಿ ಕೆರೆ ಕೆಳಗೆ ಸಂ(ಗ)ಣಗಉಡನ**
**ಸ್ಥಳ ಗದ್ದೆ ಖಂ... ಕಾಮಲಾಪುರದ**
**ಕೆರೆಯ ಕೆಳಗೆ ಹೂವಿನ ಸಿದ್ದಯನ ಸ್ಥಳದ ಗದ್ದೆ ಖಂ**
**ಮಾದಲಾಪುರದ ಗ್ರಾಮದ ಕೆರೆವೊಳಗೆ ಊಟ ಕಾಲುವೆ**
**(ಸ್ತ)ಳದಲ್ಲೂ ಲಕುಮಯ್ಯ ಹೊ(ಂ)ನ್ನಯ್ಯ ಮಲ್ಲಯ್ಯಗಳ**
**ಗದ್ದೆ ಖಂ ಅನಂತ್ತಾಪುರದಲ್ಲಿ ಕೆರೆ ಕೆಳಗೆ ಗಉಡ(ರ)ಮಲ್ಲಯ್ಯನು**
**ಮಾಡುವ ತುಂಬಿನ ಸ್ಥಳದ ಗದ್ದೆ ಖಂ (ಕಾ)ಯಿಮಲ್ಲಯ್ಯ**
**ಮಾಡುವ ಜುಉಗಿನ ಸ್ಥಳದ ಗದ್ದೆ ಖಂ**[18]

ಎಂದು ದಾಖಲಿಸಿದೆ. ಈ ಶಾಸನವು ಧರ್ಮಸಾಗರದ ಕೆರೆ ಮತ್ತು ಗದ್ದೆಗಳು ಕಾಮಲಾಪುರದ ಕೆರೆ ಮತ್ತು ಗದ್ದೆಗಳು ಮಾದಲಾಪುರ ಕೆರೆ ಮತ್ತು ಊಟ ಕಾಲುವೆ ಗದ್ದೆಗಳು ಅನಂತಾಪುರದ ಕೆರೆ ಮತ್ತು ಗದ್ದೆಗಳನ್ನು ಉಲ್ಲೇಖಿಸುತ್ತದೆ. ಇಲ್ಲಿ ಉಲ್ಲೇಖಿಸಲ್ಪಟ್ಟ ಕೆರೆಗಳ ನೀರಿನಿಂದ ಅನೇಕ ಗದ್ದೆಗಳನ್ನು ಮಾಡಿ ಬೆಳೆಗಳನ್ನು ತೆಗೆದಿರುವುದನ್ನು ಕಾಣಬಹುದು.

ವಿಠಲದೇವಾಲಯದ ಗರ್ಭಗೃಹದ ದಕ್ಷಿಣ ಅಧಿಷ್ಠಾನದಲ್ಲಿರುವ ಕ್ರಿ.ಶ. 1543ರ ಸದಾಶಿವರಾಯನ ಶಾಸನವು

**ಆನೆಗೊಂದಿಯಲು ಅಡವಿಗೆರೆಯವೊಳಗೆ**

**ಗದೆ ಯಿಖಂಡುಗ ಗದೆ ಲಿಂಗರಸರ ತೆಂಗಿನ**
**ಯಿರುಗೋರ ತೋಟಯಿಷ್ಟನು**[19]

ಎಂದು ದಾಖಲಿಸಿದೆ. ಸದಾಶಿವರಾಯನಿಂದ ತಿರುವೆಂಗಳಾಚಾರ್ಯನಿಗೆ ದಾನವಾಗಿ ಬಂದ ಆನೆಗೊಂದಿಯ ಅಡವಿಗೆರೆಯ ಒಳಗೆ ಎರಡು ಖಂಡುಗ ಗದ್ದೆ ಮತ್ತು ಲಿಂಗರಸನ ತೆಂಗಿನ ತೋಟವನ್ನು ವಿಠಲದೇವರ ನೈವೇದ್ಯಕ್ಕೆ ಸಮರ್ಪಿಸಿದ್ದನ್ನು ತಿಳಿಸುತ್ತದೆ. ಅಡವಿ ಕೆರೆಯಿಂದ ತೆಂಗಿನ ತೋಟ ಮತ್ತು ಗದ್ದೆಯನ್ನು ಮಾಡಿರುವುದನ್ನು ನಾವು ಗಮನಿಸಬಹುದು.

ಇದೇ ವಿಠಲದೇವಾಲಯದ ರಂಗ ಮಂಟಪದ ಪೂರ್ವದಿಕ್ಕಿನ ಗೋಡೆಯಲ್ಲಿರುವ ಕ್ರಿ.ಶ. 1564ರ ಸದಾಶಿವರಾಯನ ಶಾಸನವು

**ಗುಡಿ ಸೀಮೆವೊಳಗಣ ಕುಂಮರದ ವೊಳಗಣ**
**ಕರಿವಲ ಬೀಜವರಿ ಪಟಿಯ ಕೆರೆ ಕೆಳವೊಳಗು ಸ್ಥಳ**[20]

ಎಂದು ಉಲ್ಲೇಖಿಸಿದೆ. ಇದು ಸದಾಶಿವರಾಯನ ಸ್ಥಳೀಯ ಅಧಿಕಾರಿಯಾದ ಸೇನಬೋವ ಕೋನಪ್ಪನು, ವಿಠಲದೇವರ ನೈವೇದ್ಯಕ್ಕೆ ಗುಡಿ ಸೀಮೆಯಲ್ಲಿರುವ ಕುಮ್ಮರದ ಬೀಜವರಿ ಪಟಿಯ ಕೆರೆಯ ಕೆಳಗಿರುವ ಭೂಮಿಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಅಲ್ಲದೆ ಈ ಶಾಸನದಲ್ಲಿ ಬರುವ ಬೀಜವರಿ, ತೆಂಗಿನ ತೋಟ, ಗದ್ದೆ ಎಂಬ ಪದಗಳು ಕೆರೆಗಳಿಂದ ನೀರು ಹಾಯಿಸಿ ಬೆಳೆ ತೆಗೆಯುತ್ತಿದ್ದುದನ್ನು ತಿಳಿಸುತ್ತದೆ.

ಹಂಪಿಯ ಶಾಸನಗಳು ರಾಮಾಪುರದ ಕೆರೆ, ಭೂಪತಿ ಕೆರೆ, ಗೌರಾಜಿಯ ಕೆರೆ, ದೊಡ್ಡ ಕೆರೆ, ನಲತಿಮ್ಮನ ಬೋಯಿ ಕೆರೆ, ಧರ್ಮಸಾಗರ ಕೆರೆ, ಕಾಮಲಾಪುರದ ಕೆರೆ, ಮಾದಲಾಪುರ ಕೆರೆ, ಅನಂತಾಪುರ ಕೆರೆ, ಆನೆಗೊಂದಿಯ ಅಡವಿಕೆರೆ, ಕುಮ್ಮರದ ಕೆರೆ ಹೀಗೆ ಅನೇಕ ಕೆರೆಗಳನ್ನು ಅರಸರು ಅಧಿಕಾರಿಗಳು ತೋಟ, ಗದ್ದೆ, ಬೇಸಾಯಕ್ಕೆ ದನಕರುಗಳಿಗೆ ಕುಡಿಯಲು ಬಳಸುವ ಉದ್ದೇಶಕ್ಕೆ ಕಟ್ಟಿಸಿರುವುದು ಕಂಡು ಬರುತ್ತದೆ. ವಿಜಯನಗರ ಕಾಲದ ಈ ಕೆರೆಗಳನ್ನು ಶೋಧಿಸಿ ಅವುಗಳನ್ನು ಅಭಿವೃದ್ಧಿ ಪಡಿಸಬೇಕಿದೆ.

**ಬಾವಿಗಳು:** ಬಾವಿಗಳು ಮನುಷ್ಯನ ಜೀವನಾಡಿಗಳು, ಮನುಷ್ಯ ಪೂಜೆ ಮತ್ತು ಕುಡಿಯುವ ನೀರಿನ ಉದ್ದೇಶಕ್ಕಾಗಿ ಬಾವಿಗಳನ್ನು ತೆಗೆಸುತ್ತಿದ್ದ. ಮುಂದೆ ಅವನು ಸ್ನಾನ ಮತ್ತು ವ್ಯವಸಾಯದ ಕಾರ್ಯಗಳಗೆ ಉಪಯೋಗಿಸಲು ಬಾವಿಗಳನ್ನು ತೆಗೆಸುವ ಪ್ರವೃತ್ತಿ ಬೆಳೆಸಿಕೊಂಡ ಎಂದರೆ ತಪ್ಪಾಗಲಾರದು. ಹಂಪಿ ಶಾಸನಗಳು ಅನೇಕ ಬಾವಿಗಳನ್ನು ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ.

ಹೇಮಕೂಟದಲ್ಲಿರುವ ಕ್ರಿ.ಶ. 1377ರ 1ನೇ ಬುಕ್ಕರಾಯನ ಕಾಲದ ಶಾಸನವು

**ತ್ರಿಯಂಬಕ ದೇವರ ವರಪ್ರಸಾದ**
**ಭಕ್ತರ ನಾಗಪ್ಪಗಳು ಯೀ ತೀರ್ಥಅ**
**ಸ್ವಸ್ಥವ್ರಿಕ್ಷ ಕಟಿಸಿದ ಬಾವಿ**[21]

ಎಂದು ದಾಖಲಿಸಿದೆ. ತ್ರಿಯಂಬಕ ದೇವರ ಭಕ್ತನಾದ ನಾಗಪ್ಪನು ವಿನಾಯಕನಿಗೆ ಅಶ್ವತ್ಥಕಟ್ಟೆ ಮತ್ತು ಬಾವಿ ಮಾಡಿಸಿದಂತೆ ತಿಳಿದುಬರುತ್ತದೆ. ಹಂಪಿ ಶಾಸನದಲ್ಲಿ ಉಲ್ಲೇಖವಾಗಿರುವ ಮೊದಲ ಬಾವಿ ಇದಾಗಿದೆ. ವಿನಾಯಕನ ಪೂಜೆಯ ಆರ್ಘ್ಯಕ್ಕಾಗಿ ಈ ಬಾವಿಯನ್ನು ತೆಗೆಸಿರಬಹುದಾಗಿದೆ. ಇದೇ ಸ್ಥಳದ ಮತ್ತೊಂದು ಕಲ್ಲಿನಲ್ಲಿರುವ ಕ್ರಿ.ಶ. 1390ರ ಎರಡನೇ ಹರಿಹರನ ಕಾಲದ ಶಾಸನವು

**ಕ್ರಿಯಾಶಕ್ತಿವೊಡೆಯರ ಸಿಷ್ಯ ಭಕ್ತರ**
**ನಾಗಪ್ಪಗಳು ಮಾಡಿಸಿದಂಥಾ ವಿನಾಯಕ**
**ಅಶ್ವತ್ಥ ಬಾವಿಯನು ಮಾಡಿಸಿದ**[22]

ಎಂದಿದೆ. ಇದು ಸಹ ಭಕ್ತರ ನಾಗಪ್ಪನು ವಿನಾಯಕನ ಪೂಜೆಯ ಆರ್ಘ್ಯಕ್ಕಾಗಿ ಬಾವಿತೆಗೆಸಿರುವ ಸಾಧ್ಯತೆಯನ್ನು ತಿಳಿಸುತ್ತದೆ. ವಿರೂಪಾಕ್ಷ ಪೇಟೆಯ ನಂದಿಮಂಟಪದ ದಕ್ಷಿಣಕ್ಕೆ ಇರುವ ಬಂಡೆಯ ಮೇಲಿರುವ ಕಾಲದ ಉಲ್ಲೇಖವಿರದ ಶಾಸನವು **"ಮಹಾದೇವಿಯಕ್ಕ ಬಾವಿ, ಕೆಳಬಾವಿ"**[23] ಎಂದು ಶರಣೆ ಅಕ್ಕಮಹಾದೇವಿ ಹೆಸರಿನ ಬಾವಿಯನ್ನೂ ಮತ್ತು ಅದರ ಕೆಳಗೆ ಇರುವ ಬಾವಿಯನ್ನು ಹೆಸರಿಸುತ್ತದೆ. ಈ ಬಾವಿಗಳು ಎಲ್ಲಿದ್ದವೆಂಬುದನ್ನು ಶೋಧಿಸಬೇಕಾಗಿದೆ.

ಕಮಲಮಹಲ್‌ನಿಂದ ಮತಂಗ ಪರ್ವತಕ್ಕೆ ಹೋಗುವ ದಾರಿಯಲ್ಲಿರುವ ದೇವಾಲಯದ ಹಿಂಬದಿಗೆ ದೊಡ್ಡಗುಂಡಿನಲ್ಲಿರುವ ಕ್ರಿ.ಶ. 1411ರ 1ನೇ ದೇವರಾಯನ ಕಾಲದ ಶಾಸನವು

**ನರಹರಿದೇವಗಳ ಮಕ(ಳು) ದೇವರಾಯರು**
**ಕಟಿಸಿದ ಬ್ಯನಕನ ಬಾವಿ ಧರ್ಮ**[24]

ಎಂದು ಉಲ್ಲೇಖಿಸಿದೆ. ಆ ಸ್ಥಳದಲ್ಲಿರುವ ದೇವಾಲಯದ ಪೂಜಾ ಕಾರ್ಯಗಳ ತೀರ್ಥ ಜಲಕ್ಕಾಗಿ ಬಾವಿ ಕಟ್ಟಿಸಿರಬಹುದು. ಆಹಮದ್ ಖಾನ್ ಧರ್ಮಶಾಲೆಯ ಮುಂಭಾಗದ ತೊಲೆಯ ಮೇಲಿರುವ ಕ್ರಿ.ಶ. 1439ರ 2ನೇ ದೇವರಾಯನ ಕಾಲದ ಶಾಸನವು

**ಕಟಿಗೆಯ ಆಹಮುದಖಾನನು ರಾಯರಿಗೆ**
**ಧರ್ಮವಾಗಬೇಕೆಂದು ಕಟಿಸಿದ**

**ಧರ್ಮಸಾಲೆ ಬಾವಿಯನು**[25]

ಎಂದು ದಾಖಲಿಸಿದೆ. ಇದು ಇಮ್ಮಡಿ ದೇವರಾಯನ ಕಟಿಗೆ ಸೇವೆಯ ಆಹಮ್ಮದ್‌ಖಾನನು ರಾಯನಿಗೆ ಧರ್ಮವಾಗಲೆಂದು ಧರ್ಮಶಾಲೆ ಮತ್ತು ಬಾವಿಯನ್ನು ಕಟ್ಟಿಸಿರುವುದನ್ನು ಉಲ್ಲೇಖಿಸುತ್ತದೆ. ಇಲ್ಲಿ ಧರ್ಮ ಶಾಲೆಗೆ ಬಂದು ಹೋಗುವ ಜನರ ಉಪಯೋಗಕ್ಕಾಗಿ ಬಾವಿ ಕಟ್ಟಿಸಿರಬಹುದಾಗಿದೆ. ಕಾಮಲಾಪುರದಲ್ಲಿರುವ ಕೇಂದ್ರ ಪ್ರಾಚ್ಯ ವಸ್ತುಸಂಗ್ರಹಾಲಯದ ಬಳಿ ಇರುವ ಕ್ರಿ.ಶ. 1531ರ ಅಚ್ಯುತರಾಯನ ಶಾಸನವು

**ವಲ್ಲಭಯಗಳೂ ಅಗಸಿದನಾಡದಬಾವಿ**
**ಕೊಂಡ(ಮರ)ಸಯನವರು ಅಗಸಿದ ಕಪಿಲೆ ಬಾವಿ**[26]

ಎಂದು ಉಲ್ಲೇಖಿಸಿದೆ. ಈ ಶಾಸನವು ವಲ್ಲಭಯ್ಯ ಕಟ್ಟಿಸಿದ ನಾಡದ ಬಾವಿ, ಕೊಂಡಮರಸಯ್ಯ ಕಟ್ಟಿಸಿದ ಕಪಿಲೆಯ ಬಾವಿ ಎಂದು ದಾಖಲಿಸಿದೆ. ಇದರಲ್ಲಿ ಕಪಿಲೆಯ ಬಾವಿ ವ್ಯವಸಾಯಕ್ಕಾಗಿ ಕಟ್ಟಿಸಿದ ಬಾವಿಯಾಗಿದೆ.

ಇದಕ್ಕೂ ಮೊದಲು ಕಡ್ಡಿರಾಮಪುರ ಮುಸ್ಲಿಂ ಗೋರಿಗಳ ಹತ್ತಿರದ ಗುಂಡಿನ ಮೇಲಿರುವ ಕ್ರಿ.ಶ. 1505ರ ನರಸನಾಯಕನ ಕಾಲದ ಶಾಸನವು

**ಆ ಗುರುಉ ನಿರುಪ ನಮಗೆ ಮಾಖಾ**
**ಂಡಾ ತೋಟ ಭಾವಿಯನೂ ಕಟಸಿ**[27]

ಎಂದು ದಾಖಲಿಸಿದೆ. ಕಡ್ಡಿರಾಮಪುರದಲ್ಲಿ ಹರಳುತಿಪ್ಪೆ ಗುಡ್ಡದಲ್ಲಿ ಸೈದು ಫೀರು ಆಲಿ ಎಂಬುವವನು ಗುಮ್ಮಟವನ್ನು ಕಟ್ಟಿಸಿ ಅಲ್ಲಿ ತೋಟ ಮತ್ತು ಬಾವಿಯನ್ನು ಮಾಡಿಸಿದಂತೆ ತಿಳಿಸುತ್ತದೆ. ಕ್ರಿ.ಶ. 1539ರ ಅಚ್ಯುತರಾಯನ ಕಾಲದ ಶಾಸನವು

**ದೇವರಪಲ್ಲಿ ಮುಮಡಿಸೆಟಿಕಿ ಪುಣ್ಯಮುಗಾನು ಬಾವಿ**
**ನಿ ತೋಂಟವನು ತಮಿಡಿ ನಂಜಿದೇವರ ನಿರಾ**
**ಸಿ ಮಟ(ನಿ) ಕಿ ದಾರ ಪೋಸಿನ ಬುವಿ ಬಾವಿ**[28]

ಎಂದು ಉಲ್ಲೇಖಿಸಿದೆ. ದೇವರ ಪಲ್ಲಿಯ ಮುಮ್ಮಡಿ ಸೆಟ್ಟಿ ಎಂಬುವವನಿಗೆ ಪುಣ್ಯವಾಗಲೆಂದು ಬಹುಶಃ ಅವನ ವಂಶಸ್ಥರು ಬಾವಿ, ತೋಟ ಮತ್ತು ಭೂಮಿಯನ್ನು ತಮ್ಮಡಿ ನಂಜೆದೇವರ ನಿರಾಸಿ ಮಠಕ್ಕೆ ದಾನ ನೀಡಿದ್ದನ್ನು ದಾಖಲಿಸಿದೆ.

ಕಾಲದ ಉಲ್ಲೇಖವಿಲ್ಲದ ಶಾಸನವು **"ಚಿಟಿನಾಗಿಸೆನಿ ಕೊಮಾರುಂಡು ಚಿಂನಪನಾಯಂಡು ಕಟಿಂಚಿನಿ ರಂಗನಾತನಿ ಬಾವಿ"**[29] ಎಂದು ಉಲ್ಲೇಖಿಸಿದೆ. ಚಿಟಿನಾಗಿಸೇನಿಯ ಮಗ ಚಿನ್ನಪನಾಯಂಡು ಎಂಬುವನು ರಂಗನಾಥನ

ಬಾವಿಯನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1559ರ ಸದಾಶಿವರಾಯನ ವಿಠಲದೇವಾಲಯದ ಗರ್ಭಗೃಹದ ಶಾಸನವು **"ಬಡಗಲೂ ಅಗಸರ ಬಾವಿಯ ಬಳಿಯ ಬಂಡೆ"**[30] ಎಂದು ಉಲ್ಲೇಖಿಸಿದೆ. ಈ ಶಾಸನವು ಅಗಸರ ಬಾವಿಯನ್ನು ದಾಖಲಿಸಿದೆ. ಇದರಲ್ಲಿ ಅಗಸರ ಕಾಲುವೆ, ಅನಂತನ ಕಾಲುವೆ, ತೋಟ ಗದ್ದೆ ಮೊದಲಾದವುಗಳನ್ನು ಉಲ್ಲೇಖಿಸಿರುವುದನ್ನು ಗಮನಿಸಿದರೆ ಅಗಸರ ಬಾವಿಯು ವ್ಯವಸಾಯದ ಉದ್ದೇಶಕ್ಕಾಗಿ ಕಟ್ಟಿಸಿದಂತೆ ತಿಳಿದುಬರುತ್ತದೆ.

ಹೀಗೆ ಹಂಪಿಯ ಶಾಸನಗಳು ಭಕ್ತರನಾಗಪ್ಪ ತೆಗೆಸಿದ ಬಾವಿಗಳು, ಮಹಾದೇವಿಯಕ್ಕನ ಬಾವಿ, ಕೆಳಬಾವಿ, ಬೆನಕನ ಬಾವಿ, ಆಹಮ್ಮದ್ ಖಾನ್ ತೆಗೆಸಿದ ಬಾವಿ ವಲ್ಲಭಯನು ತೆಗೆಸಿದ ನಾಡದ ಬಾವಿ, ಕೊಂಡಮರಸಯ್ಯ ತೆಗೆಸಿದ ಕಪಿಲೆ ಬಾವಿ, ಸೈದುಪೀರು ಆಲಿ ತೆಗೆಸಿದಬಾವಿ, ಪಿಲಿಕುಂಚಲಕನ ಬಾವಿ, ಮುಮ್ಮಡಿಶೆಟ್ಟಿಯ ವಂಶಸ್ಥರು ತೆಗೆಸಿದ ಬಾವಿ, ರಂಗನಾಥ ಬಾವಿ, ಅಗಸರ ಬಾವಿ ಎಂಬಿತ್ಯಾದಿ 13ಕ್ಕೂ ಹೆಚ್ಚು ಬಾವಿಗಳನ್ನು ದೇವರ ಪೂಜಾಕಾರ್ಯಗಳಿಗೆ ವ್ಯವಸಾಯಕ್ಕೆ ಮತ್ತು ಇತ್ಯಾದಿಕಾರ್ಯಗಳಿಗೆ ತೆಗೆಸಿದಂತೆ ಕಂಡು ಬರುತ್ತದೆ.

ಹಂಪಿ ಶಾಸನಗಳು ತುಂಗಭದ್ರಾ ನದಿಯನ್ನು ಅನೇಕ ಗ್ರಾಮಗಳಲ್ಲಿ ಆ ಗ್ರಾಮಗಳ ಹೆಸರಿನ ಹೊಳೆಗಳೆಂದು ಕರೆದಿರುವುದು ವಿಶೇಷ. ಈ ನದಿಯ ನೀರನ್ನು ಕಾಲುವೆಗಳ ಮೂಲಕ ಹೊಲಗಳಿಗೆ ಹಾಯಿಸಿ ತೋಟಗದ್ದೆಗಳನ್ನು ಮಾಡಿರುವುದು ಆ ಮೂಲಕ ನೀರಾವರಿ ವ್ಯವಸ್ಥೆಯನ್ನು ವಿಜಯನಗರ ಅರಸರು ಜಾರಿಗೆ ತಂದಿರುವುದು ತಿಳಿದುಬರುತ್ತದೆ. ಹಾಗೆಯೇ ಲೋಕೋಪಕಾರದ ನಿಮಿತ್ತ ಅರಸರು ಮಂತ್ರಿಗಳು ಅಧಿಕಾರಿಗಳು ಅನೇಕ ಕೆರೆ ಬಾವಿಗಳನ್ನು ಕಟ್ಟಿಸಿ ದೂರದ ಪ್ರದೇಶಗಳಿಂದ ಹಂಪಿಗೆ ಬರುವ ಜನರಿಗೆ ಕುಡಿಯಲು ಸ್ನಾನಾದಿಗಳಿಗೆ ದನಕರುಗಳಿಗೆ ಉಪಯೋಗಿಸಲು ಅನುಕೂಲ ಮಾಡಿಕೊಟ್ಟಿರುವಂತೆಯೇ ಸ್ಥಳೀಯರು ವ್ಯವಸಾಯದ ಉಪಯೋಗಕ್ಕಾಗಿ ಇವುಗಳ ನೀರನ್ನು ಬಳಸಿಕೊಂಡು ತೆಂಗಿನ ತೋಟ, ಗದ್ದೆ, ಹೂವಿನ ತೋಟಗಳನ್ನು ವಿವಿಧ ಹಣ್ಣುಗಳ ಬೆಳೆಗಳನ್ನು ಬೆಳೆಯಲು ನಿರ್ಮಿಸಿದಂತೆ ತಿಳಿದುಬರುತ್ತದೆ. ಬಾವಿಯ ನೀರನ್ನು ಮುಖ್ಯವಾಗಿ ವಿವಿಧ ದೇವರ ಪೂಜಾ ಕಾರ್ಯಗಳಿಗೆ ತೀರ್ಥಜಲವಾಗಿ ಬಳಸಲು ಉಪಯೋಗಿಸಿದಂತೆ ಕಂಡುಬರುತ್ತದೆ. ಅಂದರೆ ಕುಡಿಯುವ ನೀರಿನ ಉದ್ದೇಶದ ಜೊತೆಗೆ ಪೂಜಾಕಾರ್ಯದ ಪವಿತ್ರ ಜಲವಾಗಿ ಬಳಸುವ ಉದ್ದೇಶದಿಂದ ಬಾವಿಗಳನ್ನು ತೆಗೆಸಿದಂತೆ ತಿಳಿದು ಬರುತ್ತದೆ. ಆದರೆ ಕೆಲಬಾವಿಗಳನ್ನು ವ್ಯವಸಾಯದ ಉದ್ದೇಶಕ್ಕೆ ತೆಗೆಸಿರುವುದೂ ಕಂಡುಬರುತ್ತದೆ.

ಇದರಿಂದ ಪ್ರಾಚೀನ ಕಾಲದ ನೀರಾವರಿ ಪದ್ಧತಿಯ ಬಗ್ಗೆ ತಿಳಿದು ಬರುತ್ತದೆ. ಆಗ ಬೆಳೆಯುತ್ತಿದ್ದ ಬೆಳೆಗಳು, ಹಣ್ಣುಗಳು, ಹೂಗಳ ಬಗ್ಗೆ ತಿಳಿದು ಬರುತ್ತದೆ. ಈ ಕೆರೆ ಬಾವಿಗಳನ್ನು ಪುರಾತತ್ವ ಇಲಾಖೆ ಪರಿಶೋಧಿಸಿ ಅವುಗಳನ್ನು ಅಭಿವೃದ್ಧಿ ಪಡಿಸುವ ಅಗತ್ಯವಿದೆ. ಆ ಮೂಲಕ ಮುಂದಿನ ಪೀಳಿಗೆಗೆ ಕಾಯ್ದಿರಿಸ ಬೇಕಾಗಿದೆ.

**ಅಡಿ ಟಿಪ್ಪಣಿಗಳು:**

1. ಬಸವಾರಾಧ್ಯ ಎನ್. ಸಂಕ್ಷಿಪ್ತ ಕನ್ನಡ ನಿಘಂಟು. ಪು.ಸಂ. 678
2. ಅದೇ. ಪು.ಸಂ. 691
3. ದೇವರಕೊಂಡಾರೆಡ್ಡಿ ಮತ್ತು ಇತರರು. ಕನ್ನಡ ವಿಶ್ವವಿದ್ಯಾಲಯ: ಶಾಸನ ಸಂಪುಟ–3 (ಸಂ), ಹಂಪಿ ಶಾಸನಗಳು. ಪು.ಸಂ. 163
4. ಅದೇ. ಪು.ಸಂ. 164
5. ಅದೇ. ಪು.ಸಂ. 163
6. ಅದೇ. ಪು.ಸಂ. 164
7. ಅದೇ. ಪು.ಸಂ. 148
8. ಅದೇ. ಪು.ಸಂ. 159
9. ಪೂರ್ವೋಕ್ತ. ಸಂಕ್ಷಿಪ್ತ ಕನ್ನಡ ನಿಘಂಟು. ಪು.ಸಂ. 312
10. ಪೂರ್ವೋಕ್ತ. ಹಂಪಿ ಶಾಸನಗಳು. ಪು.ಸಂ. 168
11. ಅದೇ. ಪು.ಸಂ. 193
12. ಅದೇ. ಪು.ಸಂ. 2
13. ಅದೇ ಪು.ಸಂ. 192
14. ಅದೇ. ಪು.ಸಂ. 198
15. ಅದೇ. ಪು.ಸಂ. 219
16. ಅದೇ. ಪು.ಸಂ. 106
17. ಅದೇ. ಪು.ಸಂ. 253
18. ಅದೇ. ಪು.ಸಂ. 239
19. ಅದೇ. ಪು.ಸಂ. 152
20. ಅದೇ. ಪು.ಸಂ. 159
21. ಅದೇ. ಪು.ಸಂ. 52
22. ಅದೇ. ಪು.ಸಂ. 52
23. ಅದೇ. ಪು.ಸಂ. 93
24. ಅದೇ. ಪು.ಸಂ. 217
25. ಅದೇ. ಪು.ಸಂ. 224–225
26. ಅದೇ. ಪು.ಸಂ. 234
27. ಅದೇ. ಪು.ಸಂ. 178

28. ಅದೇ. ಪು.ಸಂ. 249
29. ಅದೇ. ಪು.ಸಂ. 264
30. ಅದೇ. ಪು.ಸಂ. 146

## ಆಕರ ಗ್ರಂಥಗಳು:


1. ಬಸವಾರಾಧ್ಯ ಎನ್. (1998). ಸಂಕ್ಷಿಪ್ತ ಕನ್ನಡ ನಿಘಂಟು (ಸಂ). ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
2. ದೇವರಕೊಂಡಾರೆಡ್ಡಿ ಮತ್ತು ಇತರರು. (2000). ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ: ಸಂಪುಟ–3, ಹಂಪಿ ಶಾಸನಗಳು (ಸಂ). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.